# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 545 |
| ಸದಸ್ಯರ ಹೆಸರು | : | ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾಗಿದ ದಿನಾಂಕ | : | 20-08-2026 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಸಚಿವರು. |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಸಿಂಧನೂರು ನಗರದಲ್ಲಿ ನಡೆದಿರುವ ಯುಜಿಡಿ ಕಾಮಗಾರಿಯು ಕಳಪೆಯಿಂದ ಹಾಗೂ ಅಪೂರ್ಣತೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರದಿಂದ ಯಾವ ಕ್ರಮವಹಿಸಲಾಗಿದೆ; | ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ(KUIDFC) ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪರಿಹಾರ ನಿಧಿಯಡಿ (ಎನ್.ಜಿ.ಟಿ) ಯೋಜನೆಯಡಿ ಸಿಂಧನೂರು ನಗರಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 5 ಸಿ.ಎಸ್.ಎಸ್ 2023 ದಿನಾಂಕ: 30.11.2023 ರ ಪ್ರಕಾರ, ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪರಿಹಾರ ನಿಧಿಯಡಿ (ಎನ್.ಜಿ.ಟಿ) ಒಳಚರಂಡಿ ವ್ಯವಸ್ಥೆ ಕಲ್ಪಿಸಲು ರೂ.20.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ. ಅನುದಾನಕ್ಕೆ ಅನುಗುಣವಾಗಿ ಒಳಚರಂಡಿ ಜಾಲ, ಹಾಳಾಗಿರುವ ಕೊಳವೆ ಮಾರ್ಗ ದುರಸ್ಥಿ ಮತ್ತು ಬಿಟ್ಟು ಹೋದ ಕೊಳವೆ ಜಾಲ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಈ ಕಾಮಗಾರಿಗೆ ದಿನಾಂಕ:21.11.2025 ರಂದು M/s Dilip Kumar Saklecha JV M/s JMJ contractors. (ಜಂಟಿ ಸಹಭಾಗಿತ್ವ) ರವರಿಗೆ ಕಾರ್ಯಾದೇಶ ನೀಡಲಾಗಿದ್ದು, ಯೋಜನೆ ಪ್ರಾರಂಭಿಸಲು ಸಿಂಧನೂರು ನಗರಸಭೆ ವತಿಯಿಂದ ದಿನಾಂಕ:21.01.2026ರಂದು ಸ್ಥಳ ಹಸ್ತಾಂತರ ಮಾಡಲಾಗಿದ್ದು, ಸದರಿ ದಿನಾಂಕದಿಂದ ಕಾಮಗಾರಿಗೆ 11 ತಿಂಗಳ ಕಾಲಾವಧಿಯನ್ನು ನಿಗದಿಪಡಿಸಲಾಗಿದೆ. ಪ್ರಸ್ತುತ, ಯೋಜನೆಯ ಅನುಷ್ಠಾನ ಘಟಕ (ಸಿಂಧನೂರು ನಗರಸಭೆ) ವತಿಯಿಂದ ಒಟ್ಟು 6.90 ಕಿ.ಮೀ ಉದ್ದದ ಒಳಚರಂಡಿ ಜಾಲದ ಕಾಮಗಾರಿ ಕೈಗೊಳ್ಳಲಾಗುತ್ತಿದೆ.<br><br>ಇದರಲ್ಲಿ ಹೊಸ ಒಳಚರಂಡಿ ಜಾಲ ಅಳವಡಿಕೆ-5.10 ಕಿ.ಮೀ, ಬಿಟ್ಟು ಹೋದ ಕೊಳವೆ ಜಾಲ (Missing link)-1.80 ಕಿ.ಮೀ, ಮನೆ ಸೇವಾ ಸಂಪರ್ಕ ಒದಗಿಸುವುದು-11,520 ಸಂಖ್ಯೆ.<br><br>ಸದರಿ ಕಾಮಗಾರಿಯನ್ನು ಉತ್ತಮ ಗುಣಮಟ್ಟದಿಂದ ಕೈಗೊಳ್ಳಲಾಗುತ್ತಿದೆ. ಕಾಮಗಾರಿಯ ಗುಣಮಟ್ಟ ಹಾಗೂ ಮಾನದಂಡಗಳಂತೆ ಕಾರ್ಯನಿರ್ವಹಿಸಲು ಜಿಲ್ಲಾ ಮಟ್ಟದಲ್ಲಿ ಯೋಜನಾ ಅನುಷ್ಠಾನ ಘಟಕ (PIU) ದೊಂದಿಗೆ ಯೋಜನಾ ಸಮಾಲೋಚಕರನ್ನು (M/s. MaRS Planning and Engineering Services Pvt Ltd.) ನಿಯೋಜಿಸಲಾಗಿರುತ್ತದೆ. |
| ಆ) | ಯಾವ ಕಾಲಮಿತಿಯೊಳಗೆ ಸದರಿ ಕಾಮಗಾರಿಯ ನ್ಯೂನ್ಯತೆಗಳನ್ನು ಸರಿಪಡಿಸಿ, ಸಾರ್ವಜನಿಕ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುವುದು? | |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| | | ಪ್ರಸ್ತುತ ಕಾಮಗಾರಿಯಲ್ಲಿ ಒಳಚರಂಡಿ ಜಾಲ ಅಳವಡಿಕೆಗೆ-2.5 ಕಿ.ಮೀ ಪೈಪ್‌ಗಳ ಪೂರೈಕೆ ಮಾಡಲಾಗಿರುತ್ತದೆ ಮನೆ ಸೇವಾ ಸಂಪರ್ಕ (HSC) -1,350 ಸಂಖ್ಯೆಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ಸದರಿ ಕಾಮಗಾರಿಯಲ್ಲಿ ಶೇ 12% ರಷ್ಟು ಭೌತಿಕ ಪ್ರಗತಿಯಾಗಿದ್ದು, ಹಾಗೂ ಶೇ 5% ರಷ್ಟು ಆರ್ಥಿಕ ಪ್ರಗತಿಯಾಗಿರುತ್ತದೆ (ರೂ.94 ಲಕ್ಷಗಳು ವೆಚ್ಚವಾಗಿರುತ್ತದೆ).<br><br>**<u>ಉತ್ತರ ಕರ್ನಾಟಕ ನಗರ ವಲಯ ಹೂಡಿಕೆ ಕಾರ್ಯಕ್ರಮ (ಎನ್.ಕೆ.ಯು.ಎಸ್.ಐ.ಪಿ) ಯೋಜನೆ</u>**<br>ಎನ್.ಕೆ.ಯು.ಎಸ್.ಐ.ಪಿ ಯೋಜನೆಯಡಿ ಸಿಂಧನೂರು ನಗರದಲ್ಲಿ ಒಳಚರಂಡಿ ಕಾಮಗಾರಿಯನ್ನು ರೂ.55.75 ಕೋಟಿ (ಪರಿಷ್ಕೃತ ಗುತ್ತಿಗೆ ಮೊತ್ತ ರೂ.61.25 ಕೋಟಿ) ಗೆ ಮೆ\|\|ಯು.ಪಿ.ಎಲ್ ಇ. ಇ. ಇನ್ ಫ್ರಾ ಲಿ. ಗುಜರಾತ್ ರವರಿಗೆ ದಿನಾಂಕ 10/03/2015 ರಂದು ಗುತ್ತಿಗೆ ನೀಡಲಾಗಿತ್ತು.<br>**1) ಕಾಮಗಾರಿ ಕಳಪೆ ಆಗದಿರುವ ಬಗ್ಗೆ:**<br>• ಈ ಕಾಮಗಾರಿಯಲ್ಲಿ ಉತ್ತಮ ಗುಣಮಟ್ಟದ ಕೊಳವೆ, ಮಷಿನ್ ಹೋಲ್ ಮೇಲ್ಭಾಗದ ಮುಚ್ಚಳ ಮತ್ತು ವಿದ್ಯುತ್ ಉಪಕರಣಗಳು ISI ದೃಢೀಕೃತದಂತೆ ಅನುಮೋದಿತ QAP ಯಂತೆ ಕಾರ್ಖಾನೆಯಲ್ಲಿ ಮೂರನೇ ಏಜೆನ್ಸಿಗಳಿಂದ ಪರಿಶೀಲಿಸಿ ಖರೀಧಿಸಿದ ಸಾಮಗ್ರಿಗಳನ್ನು ಮಾತ್ರ ಉಪಯೋಗಿಸಲಾಗಿದೆ.<br>• ಜಲ್ಲಿ, ಇಟ್ಟಿಗೆ, ಮರಳು ಇನ್ನಿತರೆ ನಿರ್ಮಾಣ ಸಾಮಗ್ರಿಗಳನ್ನು ಸಹ ಪರಿಶೀಲಿಸಿ ಪರೀಕ್ಷಾಲಯಗಳಲ್ಲಿ ದೃಢೀಕರಿಸಿದ ನಂತರ ಉಪಯೋಗಿಸಲಾಗಿದೆ.<br>• ನಿರ್ಮಾಣದ ವಿವಿಧ ಹಂತಗಳಲ್ಲಿ ಸಮಾಲೋಚಕರು ಪರಿಶೀಲಿಸಿ ಕಾಮಗಾರಿಯು ಗುಣಮಟ್ಟದಿಂದ ನಿರ್ಮಿಸಲಾಗಿದೆ ಎಂದು ದೃಢೀಕರಿಸಿರುತ್ತಾರೆ.<br><br>**ಆದುದರಿಂದ, ಸಿಂಧನೂರು ನಗರದ ಒಳಚರಂಡಿ ಕಾಮಗಾರಿ ಕಳಪೆಯಾಗಿರುವುದಿಲ್ಲ.**<br><br>**2) ಕಾಮಗಾರಿ ಅಪೂರ್ಣವಾಗಿರುವ ಬಗ್ಗೆ:**<br>• ಈ ಕಾಮಗಾರಿಯಡಿ ಗುತ್ತಿಗೆ ಅನುಸಾರ ಎಲ್ಲಾ Item ಗಳನ್ನು ದಿನಾಂಕ ಮೇ 2022 ಕ್ಕೆ ಪೂರ್ಣಗೊಂಡಿರುತ್ತದೆ. ಪ್ರಸ್ತುತ ಕಾಮಗಾರಿಯು ದೋಷ ಹೊಣೆಗಾರಿಕೆ ಅವಧಿಯಲ್ಲಿರುತ್ತದೆ.<br>• ಕಾಮಗಾರಿಯಲ್ಲಿ ಕೆಲವು ದೋಷಗಳು ಕಂಡುಬಂದಿದ್ದು ಸರಿಪಡಿಸಲಾಗುತ್ತಿದೆ. |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| | | i) **ಒಳಚರಂಡಿ ಜಾಲದಲ್ಲಿ ಸರಾಗವಾಗಿ ಕಲುಷಿತ ನೀರು ಹರಿಯದಿರುವ ಬಗ್ಗೆ ಕಾರಣಗಳು**:<br>• ನಗರದ ಹಲವು ಭಾಗಗಳಲ್ಲಿ ನಗರಸಭೆ / ಇತರೆ ಇಲಾಖೆಗಳಿಂದ ಗುತ್ತಿಗೆದಾರರು ನಗರೋತ್ಥಾನ ಮತ್ತು ಇತರೆ ಯೋಜನೆಗಳಿಂದ ರಸ್ತೆ ಅಭಿವೃದ್ಧಿ ಪಡಿಸುವಾಗ ಒಳಚರಂಡಿ ಜಾಲ ಹಾಗೂ ಮಷಿನ್ ಹೋಲ್‌ಗಳ ಮುಚ್ಚಳಗಳನ್ನು ಹಾನಿಮಾಡಿ ಅನುಪಯುಕ್ತ ನಿರ್ಮಾಣ ಸಾಮಗ್ರಿಗಳನ್ನು ತುಂಬಿಸಿರುತ್ತಾರೆ.<br>• ಸ್ಥಳೀಯ ಸಂಸ್ಥೆ ವತಿಯಿಂದ ಮನೆಗಳಿಗೆ ಅಧೀಕೃತವಾಗಿ ನಿಯಮಾನುಸಾರ ಒಳಚರಂಡಿ ಸಂಪರ್ಕವನ್ನು ಕಲ್ಪಿಸಿರುವುದಿಲ್ಲ.<br><br>ಆದ ಕಾರಣ ಸ್ಥಳೀಯ ಸಂಸ್ಥೆ ವತಿಯಿಂದ ತುಂಬಿದ ಅನುಪಯುಕ್ತ ನಿರ್ಮಾಣ ಸಾಮಗ್ರಿಗಳನ್ನು ಸ್ವಚ್ಛಗೊಳಿಸುವುದ ಹಾಗೂ ನಿಯಮಾನುಸಾರ ಅಧೀಕೃತ ಒಳಚರಂಡಿ ಸಂಪರ್ಕ ನೀಡಿ ನಿರ್ವಹಣೆ ಮಾಡಬೇಕಾಗಿರುತ್ತದೆ.<br><br>ಈಗಾಗಲೇ ಪೂರ್ಣಗೊಂಡಿರುವ ಒಳಚರಂಡಿ ಮಾರ್ಗದ ನ್ಯೂನತೆಗಳನ್ನು ಸರಿಪಡಿಸಿ ಸೆಪ್ಟೆಂಬರ್-2026 ರ ಅಂತ್ಯಕ್ಕೆ ಸಿಂಧನೂರು ನಗರದ ನಾಗರೀಕರಿಗೆ ಬಳಕೆಗೆ ಮುಕ್ತಗೊಳಿಸಲಾಗುವುದು. |

ಕಡತ ಸಂಖ್ಯೆ:ನಅಇ 169 ಪಿಆರ್‌ಜೆ 2026

**(ಡಾ. ಯತೀಂದ್ರ ಸಿದ್ದರಾಮಯ್ಯ)**
ನಗರಾಭಿವೃದ್ಧಿ ಸಚಿವರು